

# ಮಕ್ಕಳಲ್ಲಿ ಓದುವ ಪ್ರವೃತ್ತಿ ಹೆಚ್ಚಾಗಲಿ

**ಮಕ್ಕಳಲ್ಲಿ ಓದುವ ಅಭಿರುಚಿ ಹುಟ್ಟಿಸಬೇಕು, ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳುವಂತೆ ಪ್ರೇರೇಪಿಸಬೇಕು. ಆದರಿಂದ ಜ್ಞಾನ ವೃದ್ಧಿಯಾಗುವ ಜೊತೆಗೆ ಭಾಷಾ ಸಾಮರ್ಥ್ಯ ಹೆಚ್ಚಿ ಪಠ್ಯ ಓದಿನ ಗ್ರಹಿಕೆ ಸುಲಭವಾಗುತ್ತದೆ.**

■ **ಪರಮೇಶ್ವರಯ್ಯ ಸೊಪ್ಪಿಮಠ**

ಇಂದು ಯಾವ ಪೋಷಕರನ್ನು ಕೇಳಿದರೂ ಬರುವ ಉತ್ತರ ಮಾತ್ರ ಒಂದೇ. 'ಅಯ್ಯೋ, ನಮ್ಮ ಮಗು ಪಠ್ಯಪುಸ್ತಕ ಓದೋದೇ ದೊಡ್ಡದು. ಇನ್ನು ಬೇರೆ ಪುಸ್ತಕ ಓದ್ತಾನಾ? ಅದೆಲ್ಲ ಆಗೊಲ್ಲ ಬಿಡಿ' ಎಂಬುದು. ಶಾಲೆ, ಮನೆ ಕೆಲಸ, ಟ್ಯೂಷನ್, ಪ್ರಾಜೆಕ್ಟ್, ಟೀವಿ, ಮೊಬೈಲ್ ಫೋನ್‌ನಲ್ಲೇ ಅವರ ಸಮಯ ಮುಗಿದು ಹೋಗಿರುತ್ತದೆ. ಅದಕ್ಕೇ ಸರಿಯಾಗಿ ಸಮಯ ಸಿಕ್ತಿಲ್ಲ. ಇನ್ನು ಬೇರೆ ಪುಸ್ತಕ ಓದೋದು ಎಲ್ಲಿ ಬಂತು? ಎನ್ನುವವರೂ ಬಹಳ ಮಂದಿ ಇದ್ದಾರೆ. ಈ ವಾಸ್ತವ ಸಂಗತಿಯಿಂದ ಮಕ್ಕಳು ಪುಸ್ತಕ ಓದುವ ಗೀಳಿನತ್ತ ಸಾಗುತ್ತಿಲ್ಲ, ಅದಕ್ಕೆ ನಮ್ಮ ಪಾಲಕರು ಸರಿಯಾಗಿ ಸ್ಪಂದಿಸುತ್ತಿಲ್ಲ. ಆದರೆ ಅದರ ಪರಿಣಾಮದಿಂದ ಆಗುವ ಅನಾಹುತಗಳ ಅರಿವು ಯಾರಿಗೂ ಸರಿಯಾಗಿ ಕಾಣದಿರುವುದು ವಿಪರ್ಯಾಸ.

ಮಕ್ಕಳು ಪುಸ್ತಕ ಓದುವುದಕ್ಕೂ ಅವರ ಭವಿಷ್ಯಕ್ಕೂ ಏನಾದರೂ ಸಂಬಂಧ ಇದೆಯಾ ಎಂದು ಅನೇಕರು ಪ್ರಶ್ನಿಸಬಹುದು. ಮಗುವನ್ನು ನಾವು ಇಂದು ಸರಿಯಾದ ರೀತಿಯಲ್ಲಿ ಬೆಳೆಸುತ್ತಿದ್ದೇವೆ ಎಂದು ಪ್ರಶ್ನೆ ಹಾಕಿಕೊಂಡರೆ, ನಾಡಿನ ಭವಿಷ್ಯದ ಪ್ರಜೆಯನ್ನು ಬಹಳವಾಗಿ ಕಡೆಗಣಿಸಿದ್ದೇವೆ ಎನ್ನದೆ ವಿಧಿಯಿಲ್ಲ. ಅವರ ಮನಸ್ಸಿನಲ್ಲಿ ಮಾನವೀಯತೆಯನ್ನು ಬಿತ್ತಲು ಸಂಪೂರ್ಣ ವಿಫಲರಾಗಿದ್ದೇವೆ. ಮಕ್ಕಳನ್ನು ಸರಿಯಾಗಿ ಬೆಳೆಸುವುದು ಒಂದು ಕಡೆಯಾದರೆ ಅದಕ್ಕೆ ಪೂರಕವಾಗಿ ಸಮರ್ಪಕ ಪರಿಕರಗಳನ್ನು ಒದಗಿಸಿಕೊಡುವುದು ಮತ್ತೊಂದು ಭಾಗ. ಪುಸ್ತಕಗಳು ಇಂತಹ ಪರಿಕರಗಳ ಪಟ್ಟಿಯಲ್ಲಿ ಮೊದಲ ಸ್ಥಾನ ಪಡೆಯುತ್ತವೆ. ಮಕ್ಕಳ ವ್ಯಕ್ತಿತ್ವ ನಿರ್ಮಾಣಕ್ಕೆ ಅನುವು ಮಾಡಿಕೊಡುವುದು. ಜೀವನವನ್ನು ಎದುರಿಸಲು ಬೇಕಾದ ಬುದ್ಧಿವಂತಿಕೆ, ಚಾಣಾಕ್ಷತೆಗಳನ್ನು ಕಲಿಸುವಂತಹ ಕೆಲಸವನ್ನು ಒಳ್ಳೆಯ ಪುಸ್ತಕಗಳು ಮಾಡುತ್ತವೆ. ಇದನ್ನು ಮನಗಂಡಿದ್ದ ಮಕ್ಕಳ ಕಾರಂತಜ್ಜ 'ಒಳ್ಳೆಯ ಮಕ್ಕಳ ಪುಸ್ತಕಗಳನ್ನು ಮಕ್ಕಳಿಗೆ ಕೊಡಿಸಬೇಕಾದುದು ಗುರು ಹಿರಿಯರು ಅವರಿಗೆ ಸಲ್ಲಿಸಬೇಕಾದ ಋಣ. ಚೆಂದದ ಉಡುಗೆ ತೊಡುಗೆ ಮತ್ತಿತರ ಕೊಡುಗೆಗಳಿಂದ ಅದನ್ನು ತೀರಿಸಲಾರೆವು' ಎಂದಿರುವುದು ಪುಸ್ತಕಗಳು ಮಕ್ಕಳ ಜೀವನದಲ್ಲಿ ವಹಿಸುವ ಪಾತ್ರವನ್ನು ಸ್ಪಷ್ಟಪಡಿಸಿದೆ.

ಮಕ್ಕಳ ಸಾಹಿತ್ಯವನ್ನು ಮಕ್ಕಳು ಓದುವುದರಿಂದ ಅವರ ಮನದಲ್ಲಿ ಸಂತಸ ಭಾವನೆ ಹೆಚ್ಚಾಗುತ್ತದೆ. ಕೇವಲ ಶಿಶುಪ್ರಾಸಗಳು ಅರ್ಥ ನೀಡದಿದ್ದರೂ ಅವರಿಗೆ ರಂಜನೆ ನೀಡುತ್ತವೆ. ಕೆಲವು ಕಡೆ ಅರ್ಥವೇ ಮುಖ್ಯವಲ್ಲ. ತಮಾಷೆ ಎಂದರೆ ಬಾಲ್ಯದಲ್ಲಿ ಇಂಥ ಪ್ರಾಸಗಳಿಂದ ಅವರಿಗೆ ಕನ್ನಡ ಪದಗಳ ಪರಿಚಯ ಆಗುತ್ತದೆ. ದೊಡ್ಡವರಾದಂತೆ ಮಕ್ಕಳ ಸಾಹಿತ್ಯ ಅಭ್ಯಾಸದಿಂದ ಭಾಷೆಯಲ್ಲಿ ಹೆಚ್ಚು ಸಾಮರ್ಥ್ಯ ಗಳಿಸುತ್ತಾರೆ. ಮಕ್ಕಳ ಸಾಹಿತ್ಯದಲ್ಲಿ ಪ್ರಾಣಿ ಪಕ್ಷಿಗಳು, ಫ್ಯಾಂಟಸಿ ಇತ್ಯಾದಿ ಬಳಕೆಯಿಂದ ಮಕ್ಕಳ ಮೃದು ಭಾವನೆಗಳಿಂದ ಅವರ ಮನಸ್ಸನ್ನು ಹಿಡಿಯುವುದು ಸುಲಭ. ಕುತೂಹಲ ಕೆರಳಿಸಿ ಖುಷಿ ಕೊಡುವ ಕಥೆ, ಕವನ, ನಾಟಕಗಳಿಂದ ಅವರ ಮನಸ್ಸನ್ನು ನಿರ್ಮಲಗೊಳಿಸಲು ಸಾಧ್ಯ.

## ರಂಜನೆಯೊಂದಿಗೆ ಬೋಧನೆ

ಮಕ್ಕಳ ಸಾಹಿತ್ಯದ ಸ್ಥಾನ ಈ ಅಂಶಗಳಿಂದ ಹೆಚ್ಚು ಮೌಲ್ಯ ಪಡೆದಿದೆ. ರಂಜನೆಯೊಂದಿಗೆ ಬೋಧನೆ. ಈ ಬೋಧನೆ ಅವರಿಗೆ ಅರಿವಿಲ್ಲದಂತೆ ನಿರಾಯಾಸವಾಗಿ ಆಗುತ್ತದೆ. ಮಕ್ಕಳು ಭಾಷೆಯನ್ನು ಚೆನ್ನಾಗಿ ಕಲಿಯುವುದಕ್ಕೆ, ಸ್ವಂತ ಆಲೋಚನಾ ಶಕ್ತಿಯನ್ನು ಬೆಳೆಸಿಕೊಳ್ಳುವಲ್ಲಿ ಮಕ್ಕಳ ಸಾಹಿತ್ಯ ಸಹಾಯಕಾರಿ ಎನ್ನುವುದು ಸರ್ವವೇದ್ಯ.

ಮಕ್ಕಳ ಸಾಹಿತ್ಯದ ಮುಖ್ಯ ಗುರಿ ಮಾನವೀಯತೆಯನ್ನು ಬೆಳೆಸುವುದಾಗಿದೆ. ಸಿದ್ಧಯ್ಯ ಪುರಾಣಿಕರು ಹೇಳುವಂತೆ 'ಏನಾದರೂ ಆಗು ಮೊದಲು ಮಾನವನಾಗು' ಎನ್ನುವ ಸಾಲು ಈ ಅಂಶಗಳಿಗೆ ಪುಷ್ಟಿ ನೀಡುತ್ತದೆ. ಹಾಗಾಗಿ ಮಕ್ಕಳ ಸಾಹಿತ್ಯ ಮಾನವೀಯತೆಗೆ ಮೊದಲ ಆದ್ಯತೆ ನೀಡುತ್ತದೆ. ಮುಂದಿನ ಜನಾಂಗದ ವ್ಯಕ್ತಿತ್ವ ನಿರ್ಮಾಣ ಅದರ ಬಹುದೊಡ್ಡ ಜವಾಬ್ದಾರಿ. ಇವತ್ತಿನ ಅಗತ್ಯಗಳನ್ನು, ಸಾಮಾಜಿಕ ಪರಿಸ್ಥಿತಿಯನ್ನು, ನೈತಿಕ ನೆಲೆಗಟ್ಟನ್ನು ಅದು ಮಕ್ಕಳ ಮನಸ್ಸಿನಲ್ಲಿ ನೆಲೆಗೊಳಿಸುತ್ತದೆ. ಒಟ್ಟಾರೆಯಾಗಿ ಬದುಕಿನ ಮೌಲ್ಯಗಳನ್ನು ಮಕ್ಕಳ ಮನಸ್ಸಿಗೆ ಮನದಟ್ಟು ಮಾಡಬಹುದಾದ ಅತ್ಯಂತ ಸುಲಭವಾದ ಮಾರ್ಗ ಎಂದರೆ ಮಕ್ಕಳ ಸಾಹಿತ್ಯ. ಇಂತಹ ಸಾಹಿತ್ಯದಿಂದ ನಾವು ಮಕ್ಕಳನ್ನು ವಿಮುಖರನ್ನಾಗಿಸುತ್ತಿರುವುದು ಎಷ್ಟು ಸರಿ?

ಸದಾ ಪುಟಿಯುವ ಮನೋಭಾವದ ಮಕ್ಕಳ ಬಾಲ್ಯದಲ್ಲಿ ಅವರು ಅಳವಡಿಸಿಕೊಳ್ಳುವ ಆದರ್ಶಗಳು, ಓದುವ ಪುಸ್ತಕಗಳು, ನೋಡುವ ಸಿನಿಮಾಗಳು, ಇಷ್ಟಪಡುವ ವ್ಯಕ್ತಿಗಳು ಅವರ ಜೀವನದ ಮೇಲೆ ಪ್ರಭಾವ ಬೀರುವುದು ನಿಜವೆಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ ನಮ್ಮ ಮಕ್ಕಳು ಸಿನಿಮಾ ನೋಡುತ್ತಾರೆ,